

ನಮ್ಮ ಬಡಾವಣೆಗೆ ಹೊಸದಾಗಿ ಬಂದಿದ್ದರು ಜಾನಕಮ್ಮ. ನನ್ನೊಂದಿಗೆ ಸಂಡಿಗೆಯಿಡಲು ಬಿಸಿಲು ಮಚ್ಚಿಗೆ ಬಂದರು. ಶುಭ್ರವಾದ ಪಂಚೆಯನ್ನು ಚಾಪೆಯ ಮೇಲೆ ಹರಡಿ ನಾವಿಬ್ಬರೂ ಅರಳು ಸಂಡಿಗೆ ಇಡಲು ತೊಡಗಿದೆವು.

'ಬೇಸಿಗೆ ಕಾಲವಾದ್ದರಿಂದ ಬೇಗನೆ ಒಣಗಿಬಿಡುತ್ತೆ, ಆದ್ರೆ ಕಾಗೆಗಳಿಂದ ಕಾವಲು ಕಾಯೋಕ್ಕೆ ಒಬ್ರು ಕೂತಿರಬೇಕು ಅಲ್ವೇ ಸರೋಜಮ್ಮ? ನಾನು ಹಳೇ ಮನೇಲಿದ್ದಾಗ ನಂದೂಗೆ ಇಷ್ಟಾಂತ ತುಂಬಾ ಹಾಕ್ತಿದ್ದೆ. ಈಗಿರೋ ಮನೇಲಿ ಮೇಲ್ಗಡೆ ಮನೆಯ ಮಾಲೀಕರಿದ್ದಾರಲ್ಲಾ... ಹಾಗಾಗಿ ಬಿಸಿಲು ಮಚ್ಚೇ ಇಲ್ಲ' ಎಂದರು ಜಾನಕಮ್ಮ.

'ಅಯ್ಯೋ ಬಿಡಿ, ನೀವೇನೂ ಹಾಕ್ಬೇಡಿ, ಒಣಗಿದ ಮೇಲೆ ನಾನೇ ನಾಲ್ಕು ಸಂಡಿಗೆ ಕೊಡ್ತೀನಿ... ಕರಿದುಕೊಳ್ಳಿ' ಎಂದೆ.

ಮೂಲೆಯ ವರಸಿದ್ಧಿ ವಿನಾಯಕನ ಗುಡಿಯಲ್ಲಿ ನವಗ್ರಹಕ್ಕೆ ಸುತ್ತುವಾಗ ಪರಿಚಿತರಾದವರು ಜಾನಕಮ್ಮ. ಹಸನ್ಮುಖದಿಂದ ಮಾತನಾಡುವ ಉತ್ಸಾಹಿ, ನನಗೆ ಬಹಳ ಬೇಗ ಇಷ್ಟವಾದರು. ಬಡಾವಣೆಗೆ ಹೊಸಬರಾದ್ದರಿಂದ ಅವರ ಸಂಸಾರದ ಕುರಿತು ನನಗೇನೂ ತಿಳಿದಿರಲಿಲ್ಲ. ಆಗಾಗ 'ನಂದು ನಂದು' ಎನ್ನುತ್ತಿದ್ದುದರಿಂದ ಅದು ಅವರ ಮೊಮ್ಮಗು ಇರಬೇಕು ಎಂದುಕೊಂಡಿದ್ದೆ. ಇನ್ನೊಬ್ಬರ ಬಗ್ಗೆ ಕೆದಕಿ ಕೇಳುವ ಕುತೂಹಲ ನನಗೆ ಮೊದಲಿನಿಂದಲೂ ಇಲ್ಲ. ಅವರಾಗಿ ಹೇಳಿದರೆ ಕೇಳಿಸಿಕೊಳ್ಳುವ ಅಭ್ಯಾಸವಷ್ಟೆ.

ಸಂಡಿಗೆ ಇಟ್ಟು ಮುಗಿಯುತ್ತಿದ್ದಂತೆಯೇ ಮೇಲೆದ್ದ ಜಾನಕಮ್ಮ 'ನಂದೂಗೆ ಊಟ ಕೊಡಬೇಕು ಸರೋಜಮ್ಮ, ನಾನು ಇಲ್ದಿದ್ರೆ ಅವನು ಸರಿಯಾಗಿ ಊಟವೇ ಮಾಡೊಲ್ಲ, ನಮ್ಮೆಜಮಾನ್ರ ಮಾತೇ ಕೇಳೊಲ್ಲ ಅವ್ನು' ಎಂದರು. ಸುಮಾರು ನನ್ನಷ್ಟೇ ಪ್ರಾಯದ ಆಕೆ ನೋಡಲು ಲಕ್ಷಣವಾಗಿದ್ದರು. ಹಣೆಯಲ್ಲಿನ ತಿಲಕ, ಮೂಗಿಗೆ ಹಾಕಿದ್ದ ಅರ್ಧ ಚಂದ್ರಾಕೃತಿಯ ಮೂಗುತಿ, ಕಿವಿಯಲ್ಲಿಟ್ಟ ಕಾಸಗಲ ವಜ್ರದ ಬೆಂಡೋಲೆ, ಕತ್ತಿನಲ್ಲಿ ಹೊಳೆಯುತ್ತಿದ್ದ ಒಂದೆಳೆ ಉಡಿದಾರದ ಸರ, ಅವರ ಸೊಬಗನ್ನು ಹೆಚ್ಚಿಸಿದ್ದವು.

ಅದೇಕೋ ಅವರು ಮೊಮ್ಮಗನೊಡನೆ ಒಮ್ಮೆಯೂ ಹೊರಗೆ ಸುತ್ತಾಡಿದ್ದೇ ನೋಡಿರಲಿಲ್ಲ ನಾನು. 'ಮನೆಗೆ ಬನ್ನಿ' ಅಂತ ಆಕೆ ಕರೆದರೂ, ನನಗೇ ಹೋಗಲಾಗಿರಲಿಲ್ಲ. ಅಮೆರಿಕದಿಂದ ರಜೆಯಲ್ಲಿ ಬಂದ ಮಗಳು–ಅಳಿಯನ ಉಪಚಾರದಲ್ಲಿ ಸಮಯವೇ ಸಿಕ್ಕಿರಲಿಲ್ಲ ನನಗೆ. ಜಾನಕಮ್ಮ ಮಾತ್ರ ದಿನಕ್ಕೊಮ್ಮೆಯಾದರೂ ಬಂದು ನನ್ನ ಯೋಗಕ್ಷೇಮ ವಿಚಾರಿಸದೆ ಇರುತ್ತಿರಲಿಲ್ಲ. ಅವರ ಆತ್ಮೀಯತೆ ಆಪ್ಯಾಯಮಾನ!

ಮರುದಿನ ನನ್ನ ಮಗಳೊಂದಿಗೆ ವಾಕಿಂಗ್ ಹೋಗುವಾಗ ಕೇಳಿದೆ: 'ಜಾನಕಮ್ಮ ಮನೆಗೆ ಬನ್ನೀಂತ ಕರೆಯುತ್ತಲೇ ಇದ್ದಾರೆ. ಈವತ್ತು ವಾಪಸ್ ಹೋಗುತ್ತಾ ಅವರ ಮನೆಗೆ ಹೋಗಿಬರೋಣ್ವೆ ಸಂಧ್ಯಾ?'

'ಬರ್‍ತೀವಿ ಅಂತ ಹೇಳಿ ಹೋಗಬೇಕಲ್ವಾ ಅಮ್ಮಾ? ಅಮೆರಿಕದಲ್ಲಿ ಹೀಗೆ ದಿಢೀರ್ ಅಂತ ಇನ್ನೊಬ್ಬರ ಮನೆಗೆ ಹೋಗುವಂತೆಯೇ ಇಲ್ಲ. ಮೊದಲೇ ತಿಳಿಸಿ, ಅಪಾಯಿಂಟ್‌ಮೆಂಟ್ (ಭೇಟಿಯ ವೇಳೆ) ಪಡೆದೇ ಹೋಗಬೇಕು. ಇಲ್ದಿದ್ರೆ ಮುಖ ಚಿಕ್ಕದು ಮಾಡಿಕೊಳ್ತಾರೆ' ಎಂದಳು ಸಂಧ್ಯಾ.

'ಅಯ್ಯೋ, ಇಲ್ಲಿ ಅದೆಲ್ಲಾ ಏನೂ ಬೇಕಿಲ್ಲಮ್ಮ, ಒಬ್ಬರ ಮನೆಗೊಬ್ಬರು ಹೋದರೆ ಸಂತೋಷದಿಂದ ಸ್ವಾಗತಿಸ್ತಾರೆ; ಕಾಫಿ–ತಿಂಡಿ ಕೊಟ್ಟು ಕಳುಹಿಸ್ತಾರೆ' ಎಂದೆ.

ಅತೀ ಶಿಷ್ಟಾಚಾರ ಪರದೇಶದಲ್ಲಿ ಮಾತ್ರ ಎಂದು ನಾನು ಬಲ್ಲೆ, ನಾನು–ನಮ್ಮವರು ಅಲ್ಲಿಗೆ ಹೋಗಿದ್ದಾಗ, ನಾನೇ ಅಕ್ಕ–ಪಕ್ಕದ ಮನೆಗಳಿಗೆ ಹೋದದ್ದೇ ಇಲ್ಲ. ಮಗಳು–ಅಳಿಯ ಎಲ್ಲಿಗಾದರೂ ಕರೆದೊಯ್ದರೆ ಉಂಟು, ಇಲ್ಲವಾದರೆ ಗೃಹಬಂಧನವೇ!

ಸಂಧ್ಯಾ ಒಪ್ಪಿದಳೆಂದು, ನಾವು ಜಾನಕಮ್ಮನ ಮನೆಯೊಳಕ್ಕೆ ಹೊಕ್ಕೆವು. ಅವರದ್ದು ನಮ್ಮ ರಸ್ತೆಯಲ್ಲಿ ಕಡೇ ಮನೆ. ಹಜಾರದಲ್ಲಿದ್ದ ಅವರ ಪತಿ ನಮ್ಮನ್ನು ಸ್ವಾಗತಿಸಿ, ಸೋಫಾದ ಮೇಲೆ ಕುಳ್ಳಿರಿಸಿದರು.

ಪತ್ನಿಯನ್ನು ಕೂಗುತ್ತಾ 'ಜಾನಕೀ, ನೋಡು ಸರೋಜಮ್ಮ ಬಂದಿದ್ದಾರೆ, ಒಳಗೆ ಕಳುಹಿಸಲೇ? ನಾನು ಹಾಗೇ ಪಾರ್ಕಿನಲ್ಲಿ ವಾಕ್ ಮಾಡಿ ಬರ್‍ತೀನಿ' ಎನ್ನುತ್ತಾ ಹೊರನಡೆದರು. ಜಾನಕಮ್ಮ ಒಳಕೋಣೆಯಿಂದ 'ಇಲ್ಲೇ ಬನ್ನಿ ಸರೋಜಮ್ಮ... ನಂದೂಗೆ ಬಟ್ಟೆ ಹಾಕ್ತಾ ಇದೀನಿ' ಎಂದರು.

ಕೋಣೆಯೊಳಗೆ ಹೊಕ್ಕಾಗ, ನಾವು ಕಂಡ ದೃಶ್ಯ ನಮ್ಮನ್ನು ಬೆಚ್ಚಿ ಬೀಳಿಸಿತು! ಸುಮಾರು ಮೂವತ್ತರ ಆಸುಪಾಸಿನ ಯುವಕ ಹಾಸಿಗೆಯ ಮೇಲಿದ್ದ. ಜಾನಕಮ್ಮ ಅವನಿಗೆ ಪ್ಯಾಂಟು–ಶರ್ಟ್ ತೊಡಿಸುತ್ತಿದ್ದರು. ಶರ್ಟ್‌ನ ತೋಳೇರಿಸಲು ಬಿಡದೆ ಚಿಕ್ಕ ಮಗುವಿನಂತೆ ಹಟ ಮಾಡುತ್ತಿದ್ದ ನಂದೂ!

'ಇವನೇ ನೋಡಿ ನನ್ನ ಮಗ ನಂದೂ... ನಂದಕಿಶೋರ. ನಾಲ್ಕು ವರ್ಷದ ಮಕ್ಕಳ ಹಾಗೆ ಇವನ ಬೌದ್ಧಿಕ ಬೆಳವಣಿಗೆ. ಶರೀರ ಮಾತ್ರ ಬೆಳೆದಿದೆ ಅಷ್ಟೆ. ನಂದೂ ಅವನಾಗಿ ಏನನ್ನೂ ಮಾಡಿಕೊಳ್ಳುವುದಿಲ್ಲ. ಅದಕ್ಕೇ ತಿಂಡಿ–ಊಟ ಎಲ್ಲವನ್ನೂ ನಾನೇ ಉಣ್ಣಿಸಬೇಕು. ಸ್ನಾನ ಮಾಡಿಸಲು ನಮ್ಮವರು ಸ್ವಲ್ಪ ಸಹಾಯ ಮಾಡ್ತಾರೆ. ಆದರೂ ನಾನಿಲ್ಲಾಂದ್ರೆ ನೀರನ್ನೆಲ್ಲಾ ಕೆಳಗೆ ಸುರಿದು, ಚೊಂಬನ್ನು ಅವರ ಮೇಲೆ ಎಸೆದುಬಿಡ್ತಾನೆ. ನನ್ನೊಬ್ಬಳ ಹತ್ತಿರ ಸ್ವಲ್ಪ ಸಮಾಧಾನವಾಗಿರ್ತಾನೆ' ಎಂದು ಶರ್ಟಿನ ಗುಂಡಿ ಹಾಕುತ್ತಾ ಹೇಳಿದರು ಜಾನಕಮ್ಮ.

ನಾನು–ಸಂಧ್ಯಾ ಇನ್ನೂ ಶಾಕ್‌ನಲ್ಲೇ ಇದ್ದೆವು.

**'ಬನ್ನಿ ಸರೋಜಮ್ಮ. ಭಗವಂತ ನನ್ನ ಮೊರೆ ಕೇಳಿಬಿಟ್ಟ. ನಮ್ಮ ನಂದೂ ಹೋಗಿ ಸೇರಿಬಿಟ್ಟ! ನನಗೀಗ ನಿಶ್ಚಿಂತೆ...' ಮಗ ಅಮೆರಿಕ ತಲುಪಿದ ಎನ್ನುವಷ್ಟು ಸಹಜವಾಗಿ ಜಾನಕಮ್ಮ ಹೇಳಿದರು.**